# ಘಮ ಘಮ ಕ್ಯಾಂಡಲ್!

ಚಿತ್ರ ಬರಹ: ಬಿ.ಎಸ್. ಚಂದ್ರಕಲಾ



ಕ್ರಿಸ್‌ಮಸ್ ಹಬ್ಬದಲ್ಲಿ ಕೇಕ್, ಕ್ಯಾಂಡಲ್‌ಗಳದ್ದೇ ಪಾರುಪತ್ಯ. ಪ್ರತಿ ವರ್ಷ ಒಂದೇ ರೀತಿಯ ಮೇಣದ ಬತ್ತಿಗಳನ್ನು ಹಚ್ಚುತ್ತಿದ್ದೀರಾ..? ಹಾಗಿದ್ದರೆ ಈ ಸಲ ವೈವಿಧ್ಯಮಯ ಕ್ಯಾಂಡಲ್ ಹಚ್ಚಿ ಹಬ್ಬವನ್ನು ವಿಭಿನ್ನವಾಗಿ ಸಂಭ್ರಮಿಸಬಹುದಲ್ಲವೇ..?

ಇದೀಗ ಮಾರುಕಟ್ಟೆಯಲ್ಲಿ ವಿವಿಧ ಘಮಲಿನ ಕ್ಯಾಂಡಲ್, ಫ್ಲೋಟಿಂಗ್ ಕ್ಯಾಂಡಲ್‌ಗಳು, ಜೆಲ್ಲಿ ಕ್ಯಾಂಡಲ್‌ಗಳು ಸಿಗುತ್ತವೆ. ಆದರೆ ವಿಧ ವಿಧವಾದ ಕ್ಯಾಂಡಲ್‌ಗಳನ್ನು ಮನೆಯಲ್ಲೇ ತಯಾರಿಸಿ ಬೇಕಾದ ಬಣ್ಣಗಳನ್ನು ಹಚ್ಚಿದರೆ ನೋಡಲು ದಸರಾ ಗೊಂಬೆಗಳಷ್ಟೇ ಸುಂದರ. ಮಾಡಲು ಬಹು ಸರಳ. ಬೇಕಾಗುವ ಪದಾರ್ಥಗಳು ಸಹ ಹೆಚ್ಚೇನಿಲ್ಲ. ಉತ್ತಮ ದರ್ಜೆಯ ಮೇಣ, ಕ್ರೆಯಾನ್ಸ್ ಅದಕ್ಕೆಂದೇ ಸಿಗುವ ಅಚ್ಚುಗಳು ದಾರದ ಬತ್ತಿಗಳು, ಸುಗಂಧ.. ಇವಿಷ್ಟೇ ಸಾಕು.

ಮೇಣವನ್ನು ಕರಗಿಸಿ ಅದಕ್ಕೆ ಕ್ರೆಯಾನ್ಸ್ ಅನ್ನು ಪುಡಿ ಮಾಡಿ ಬೆರೆಸಿದರೆ ಬಣ್ಣದ ಕರಗಿದ ಮೇಣ ತಯಾರಾಗುತ್ತದೆ. ಈಗ ಅಚ್ಚುಗಳಿಗೆ ಯಾವುದಾದರೊಂದು ಎಣ್ಣೆಯನ್ನು ಸವರಿ ಕರಗಿದ ರಸವನ್ನು ಸುರಿದು ಸ್ವಲ್ಪ ಹಸಿ ಇರುವಾಗ ಮಧ್ಯೆ ಒಂದು ದಾರದ ಬತ್ತಿಯನ್ನು ಇಟ್ಟರೆ ಒಂದು ಕ್ಯಾಂಡಲ್ ರೆಡಿ. ಆರಿದ ನಂತರ ತೆಗೆದು (ಬಹಳ ಸಮಯ ಹಿಡಿಸುವುದಿಲ್ಲ) ಎಣ್ಣೆಯನ್ನು ಒರೆಸಿ ಬೇಕಾದ ಹಾಗೆ ಪೈಂಟ್ ಮಾಡಿ, ವಿಶೇಷ ದಿನಗಳಲ್ಲಿ, ಕ್ರಿಸ್‌ಮಸ್ ದಿನಗಳಲ್ಲಿ ಹಚ್ಚಿದರೆ ನೋಡಲು ತುಂಬಾ ಆಕರ್ಷಕವಾಗಿರುತ್ತದೆ.

ಇನ್ನು ಸಾದಾ ಕ್ಯಾಂಡಲ್ ಮಾಡಲು ಕೊಳವೆಗಳಿಗೆ ಕರಗಿದ ಮೇಣವನ್ನು ಸುರಿದು ತಯಾರಿಸಬಹುದು. ತೆಳ್ಳಗಿನ ತಗಡಿನಿಂದ ಸಾದಾ ಸಾದಾ ಕ್ಯಾಂಡಲ್‌ಗಳನ್ನು ತಯಾರಿಸಲು (ಚೌಕ, ವೃತ್ತಾಕಾರ, ಓವಲ್ ಈ ಆಕಾರಗಳ ಅಚ್ಚುಗಳನ್ನು ನೀವೇ ತಯಾರಿಸಿಕೊಳ್ಳಬಹುದು. ಇನ್ನು ಹೂಗಳ ಕ್ಯಾಂಡಲ್‌ಗಳನ್ನು ತಯಾರಿಸಲು ಕರಗಿದ ಮೇಣವನ್ನು ಎಣ್ಣೆ ಸವರಿದ ತಟ್ಟೆಗಳಿಗೆ ತೆಳುವಾಗಿ ಹರಡಿ ಸ್ವಲ್ಪ ಆರಿದ ನಂತರ ಪಕಳೆಗಳನ್ನು ಕತ್ತರಿಸಿಕೊಂಡು ಜೋಡಿಸಿದರೆ ಒಂದು ಹೂವು ರೆಡಿ. ಮಧ್ಯೆ ಒಂದು ಕ್ಯಾಂಡಲ್ ಅನ್ನು ಅಂಟಿಸಿದರೆ ಅದರ ಸೌಂದರ್ಯ ಇಮ್ಮಡಿಯಾಗುತ್ತದೆ. ■





